

ದೊಡ್ಡದಾದ ಸಿಲ್ವರ್ ಜುಮ್ಕಾ ಇಂದಿನ ಫ್ಯಾಷನ್. ಯಾವುದೇ ಸಮಾರಂಭಕ್ಕಾದರೂ ಸರಿ, ಯಾವ ವಿಧದ ವಸ್ತ್ರ ವಿನ್ಯಾಸವಾದರೂ ಸರಿ ಇದು ಸೂಟ್ ಆಗುತ್ತದೆ. ಚಿನ್ನದಷ್ಟು ದುಬಾರಿಯಲ್ಲದೇ ಇರುವ ಕಾರಣಕ್ಕೋ ಅಥವಾ ಇದರ ವಿನ್ಯಾಸದಿಂದಲೋ ಈ ಸಿಲ್ವರ್ ಜುಮ್ಕಾಗಳು ಹೆಂಗಳೆಯರ ಅಚ್ಚುಮೆಚ್ಚು ಆಗಿವೆ. ಚಿನ್ನದ ಜುಮ್ಕಾಗಳಿಗಿಂತ ಈಗಿನವರು ಸಿಲ್ವರ್, ಮೆಟಲ್ ಜುಮ್ಕಾಗಳನ್ನೇ ಇಷ್ಟಪಡುತ್ತಾರೆ.

**■ ಪವಿತ್ರಾ ರಾಘವೇಂದ್ರ ಶೆಟ್ಟಿ**

# ಜುಮ್ಕಾ ಕಮಾಲ್







ಹೆಣ್ಣು ಎಷ್ಟೇ ಸುಂದರವಾಗಿ ಅಲಂಕರಿಸಿಕೊಂಡರೂ ಅವಳ ಸೌಂದರ್ಯಕ್ಕೆ ಹೆಚ್ಚು ಮೆರುಗು ನೀಡುವುದು ಅವಳು ಧರಿಸಿದ ಕಿವಿಯೋಲೆ. ಅದರಲ್ಲೂ ಸಾಂಪ್ರದಾಯಿಕ ಉಡುಗೆ ತೊಟ್ಟು ಕಿವಿಗೆ ಜುಮ್ಕಾ ತೊಟ್ಟಾಗ ಹೆಣ್ಣಿನ ಸೌಂದರ್ಯ ಮತ್ತಷ್ಟೂ, ಮೊಗದಷ್ಟು ಹೆಚ್ಚುತ್ತದೆ. ಸದ್ಯ ಮಾರುಕಟ್ಟೆಯಲ್ಲಿ ಟ್ರೆಂಡ್‌ನಲ್ಲಿರುವುದು ಸಿಲ್ವರ್ ಜುಮ್ಕಾ.

ದೊಡ್ಡದಾದ ಸಿಲ್ವರ್ ಜುಮ್ಕಾ ಇಂದಿನ ಫ್ಯಾಷನ್. ಯಾವುದೇ ಸಮಾರಂಭಕ್ಕಾದರೂ ಸರಿ, ಯಾವ ವಿಧದ ವಸ್ತ್ರ ವಿನ್ಯಾಸವಾದರೂ ಸರಿ ಇದು ಸೂಟ್ ಆಗುತ್ತದೆ. ಚಿನ್ನದಷ್ಟು ದುಬಾರಿಯಲ್ಲದೇ ಇರುವ ಕಾರಣಕ್ಕೋ ಅಥವಾ ಇದರ ವಿನ್ಯಾಸದಿಂದಲೋ ಈ ಸಿಲ್ವರ್ ಜುಮ್ಕಾಗಳು ಹೆಂಗಳೆಯರ ಅಚ್ಚುಮೆಚ್ಚು ಆಗಿವೆ. ಅದೂ ಅಲ್ಲದೆ ಯಾವುದಾದರೂ ಕಾರ್ಯಕ್ರಮದಲ್ಲಿ ಹೆಣ್ಣುಮಗಳೊಬ್ಬಳು ತೊಟ್ಟ ಸೀರೆಗಿಂತ ಅವಳು ಧರಿಸಿದ ಕಿವಿಯೋಲೆಯ ವಿನ್ಯಾಸವೇ ಹೆಚ್ಚು ಜನರನ್ನು ಆಕರ್ಷಿಸುತ್ತದೆ. ಕಾಲಕಾಲಕ್ಕೆ ಬದಲಾಗುತ್ತಿರುವ ಫ್ಯಾಷನ್‌ಗೆ ತಕ್ಕಂತೆ ಈ ಕಿವಿಯೋಲೆಗಳು ಕೂಡ ಹೊಸ ವಿನ್ಯಾಸಗಳಲ್ಲಿ ಬಿಡುಗಡೆಗೊಳ್ಳುತ್ತಿವೆ. ನಾರಿಯರ ಸೌಂದರ್ಯವನ್ನು ಹೆಚ್ಚಿಸುತ್ತಿವೆ.

## ಸಿಲ್ವರ್ ಆಭರಣ- ಇತಿಹಾಸ

ಗ್ರಾಮೀಣ ಪ್ರದೇಶ ಹಾಗೂ ಬುಡಕಟ್ಟು